# ಎರಡು ಸಮಾರಂಭಗಳು...

ಸಮಾರಂಭ ಒಂದು– ಅರಮನೆ ಮೈದಾನದ ವಿಶಾಲ ಬಯಲು. ಚಿತ್ರರಂಗದ ಬಹುತೇಕ ನಟ–ನಟಿಯರು ತಾಲೀಮು ನಡೆಸಿ ಬಂದಿದ್ದರು. ಅವರೆಲ್ಲರ ಹಾಡು, ಕುಣಿತ ನಡೆಯುತ್ತದೆಂದು ಟೀವಿ ವಾಹಿನಿಗಳಲ್ಲಿ ವ್ಯಾಪಕ ಪ್ರಚಾರವಾಗಿತ್ತು. 'ಕರ್ಣ' ಎಂದೇ ಖ್ಯಾತಿವೆತ್ತ ನಟನಿಗೆ ಅರವತ್ತು ತುಂಬುವ ಸಮಾರಂಭ ಎಂದ ಮೇಲೆ ಕನ್ನಡ ಚಿತ್ರರಂಗ ಒಂದಾಗದೇ ಇದ್ದರೆ ಹೇಗೆ? ನೀಳಕಾಯದ ಇಬ್ಬರು ಸ್ಟಾರ್‌ಗಳಿಗಂತೂ ಈ ನಟನೆಂದರೆ ಬಲುಪ್ರೀತಿ. 'ಕಾರ್ಯಕ್ರಮವನ್ನು ಬೊಂಬಾಟ್ ಮಾಡಿಬಿಡುತ್ತೇವೆ' ಎಂದು ವಾರಗಳ ಹಿಂದೆಯೇ ಹೇಳಿದ್ದರು.

ಕಾರ್ಯಕ್ರಮದ ದಿನ. ಬಯಲುಸೀಮೆಯವರಿಗೆಲ್ಲಾ ಮಂಡ್ಯದ ಗಂಡಿನ ಮೇಲೆ ಇನ್ನಿಲ್ಲದ ಪ್ರೀತಿ ಎಂಬ ಕಾಲವೊಂದಿತ್ತು. ಹಾಗಾಗಿ ಬೆಂಗಳೂರು ಹೊರವಲಯದ ಗೆಳೆಯರ ಬಳಗದಲ್ಲೊಂದು ಚರ್ಚೆ. 'ಚಿತ್ರರಂಗಕ್ಕೆ ಆ ನಟನ ಕಾಂಟ್ರಿಬ್ಯೂಷನ್ ಏನು?' ಎಂಬುದು ಒಬ್ಬನ ಪಾಯಿಂಟು. 'ಡಬ್ಬಿಂಗ್ ಕೆಂಡ ಆಡುತ್ತಿದ್ದರೂ ಈ ವಯ್ಯ ಏನೂ ಮಾತಾಡುತ್ತಿಲ್ಲವಲ್ಲ?' ಅಂತ ಇನ್ನೊಬ್ಬ ಕಳಕಳಿ ತೇಲಿಬಿಟ್ಟ. 'ಕನ್ನಡ ಸ್ಕೂಲುಗಳ ಬಗ್ಗೆ ಈ ಯಪ್ಪನಿಗೆ ಸ್ವಲ್ಪವೂ ಕಾಳಜಿ ಇಲ್ಲ, ಸಮಾರಂಭ ಬೇರೆ ಕೇಡು' ಎನ್ನುವ ಮಾತು ಕುಟುಕಿದಂತಿತ್ತು. ಕೊನೆಗೆ ಒಬ್ಬ ಹೇಳಿದ– 'ನಾನು ಅವರ ಅಭಿಮಾನಿ. ಅಲ್ಲಿಗೆ ಹೋಗುತ್ತೇನಷ್ಟೆ'. ಮರುದಿನ ಅವನು ಹೇಳಿದ್ದು– 'ಆಗೆಲ್ಲಾ ನನ್ನ ಜೊತೆ ಕಟೌಟ್‌ಗೆ ಅಭಿಷೇಕ ಮಾಡುತ್ತಿದ್ದವರು, ಬ್ಲ್ಯಾಕ್ ಟಿಕೇಟ್ ಮಾರಾಟ ನೋಡಿ ಆನಂದಿಸುತ್ತಾ ಇದ್ದವರು ಅಲ್ಲಿರಲಿಲ್ಲ. ಅವರೆಲ್ಲಾ ಅಭಿಮಾನಿಗಳ ತರಹ ಕಾಣಲೇ ಇಲ್ಲ. ಬೇಜಾರಾಯಿತು'.

'ನಾನು ಏನು ಹೇಳಬೇಕೋ ಅದನ್ನು ಅರಮನೆ ಮೈದಾನದ ಸಮಾರಂಭದ ಭಾಷಣದಲ್ಲಿ ಹೇಳುತ್ತೇನೆ' ಎಂದು ಸಂದರ್ಶನಗಳಲ್ಲಿ ಹೇಳಿಕೊಂಡಿದ್ದ ರೆಬೆಲ್ ನಾಯಕನ ಭಾಷಣದಲ್ಲಿ ಚಿತ್ರೋದ್ಯಮದ ಯಾವ ಸಮಕಾಲೀನ ಸಮಸ್ಯೆಗಳೂ ಪ್ರಸ್ತಾಪವಾಗಲೇ ಇಲ್ಲ. ನಾಯಕತ್ವದ ಕೊರತೆ, ಡಬ್ಬಿಂಗ್ ವಿವಾದ, ಚಿತ್ರಮಂದಿರಗಳ ಸಮಸ್ಯೆಗಳು, ಕಾಲ್‌ಷೀಟ್ ಕಿರಿಕಿರಿ– ಊಹ್ಞೂಂ, ಇವ್ಯಾವುದೂ ಇರಲೇ ಇಲ್ಲ. ಅವರಿಗೆ ಏರ್ಪಾಟಾಗಿದ್ದ ಅಭಿಮಾನದ ಮಳೆಯಲ್ಲಿ ಮೀಯುವ ಸುಖವಷ್ಟೇ ಸಾಕಾಯಿತು. ಏರ್ಪಾಟಾದ ಅಭಿಮಾನದ ಆಯುಸ್ಸು ಕಡಿಮೆ ಎಂಬುದರ ಅರಿವಿರದ ಮುಗ್ಧತೆ ಅವರದ್ದೆನ್ನೋಣವೇ?

ಸಮಾರಂಭ ಎರಡು– ಅಪ್ಪನ ಬಗ್ಗೆ ಪವರ್‌ಸ್ಟಾರ್ ತಮ್ಮ ಸ್ನೇಹಿತರ ಜೊತೆ ಸೇರಿ ರಚಿಸಿದ ಪುಸ್ತಕ ಲೋಕಾರ್ಪಣೆ ಸಮಾರಂಭ. ಅಲ್ಲಿ ಅವರ ಹಿರಿಯತ್ತೆ ಇದ್ದರು. ಕಾಯಿಲೆಯಿಂದ ಹೈರಾಣಾದ ಅಮ್ಮ ಇದ್ದರು. ಬಂಧುಮಿತ್ರರೆಲ್ಲಾ ಹೆಚ್ಚಾಗಿದ್ದರು. ಬೆರಳೆಣಿಕೆಯಷ್ಟು ಮಾತ್ರ ಸಿನಿಮಾ ಮಂದಿ ಇದ್ದರು. ಅಭಿಮಾನಿಗಳ ಆವುಟ ಅಲ್ಲಿರಲಿಲ್ಲ. ದೊಡ್ಡವರ ಕಂಡೊಡನೆ ಅವರ ಕಾಲಿಗೆ ನಮಸ್ಕರಿಸುತ್ತಾ, ಚಿಕ್ಕವರ ಕೆನ್ನೆಗೆ ಕೈ ತಾಕಿಸಿ ಸಂತೋಷ ಪಡುತ್ತಿದ್ದರು. ತಂದೆಯ ನೆನಪಲ್ಲಷ್ಟೇ ತೇವವಾಗಿದ್ದ ಅಲ್ಲಿ ಕಂಡದ್ದು ಹಬ್ಬದ ವಾತಾವರಣವಷ್ಟೆ. ಅವರೇ ಹೇಳಿಕೊಂಡಂತೆ– 'ಇವೆಲ್ಲಾ ಸಣ್ಣಪುಟ್ಟ ಖುಷಿಗಳಷ್ಟೆ'. ಆ ಸಣ್ಣಪುಟ್ಟ ಖುಷಿಗೆ ಕಾರಣ– ಹದಿನೈದು ವರ್ಷದ ಹಿಂದೆ ಹುಟ್ಟಿದ ಪುಸ್ತಕ ರಚಿಸುವ ಯೋಚನೆ.

ಕೆಲವೇ ದಿನಗಳ ಅಂತರದಲ್ಲಿ ನಡೆದ ಎರಡು ಸಿನಿಮಾ ಸಮಾರಂಭಗಳ ನಡುವೆ ಎಷ್ಟೊಂದು ವ್ಯತ್ಯಾಸ. ಇದೇ ಸಿನಿಮಾ ಮಾಯೆ!

–ಎನ್ವಿ

Printed and Published by S.V. Srinivasan on behalf of **The Printers (Mysore) Private Ltd.** Printed at M/s. Rajhans Enterprises, no. 134, 4th main road, Industrial Town, Rajajinagar, Bangalore - 560044. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: **K.N. SHANTH KUMAR.**

Editorial Office: 75, M.G Road, Bangalore-560 001 E-mail:editormy@deccanherald.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited.RNI No 17129/68